
# ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ.

ಕಲಿಸ್ತ್ರೀಕಟ್ಟೆ ಹುಂಡಿ

ದಿನಾಂಕ 16.12.99 ರಿಂದ 19-12-99.



ತಂಡದ ಸಂಖ್ಯೆ = 7

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಬಿಳಿಗಿರಿರಂಗನಬೆಟ್ಟ ಯಳಂದೂರು. ತಾ||

ಸಹಯೋಗ . ಕರುಣಾ ಟ್ರಸ್ಟ್

# ಮುನ್ನುಡಿ

ಪ್ರಾಥಮಿಕ ಆರೋಗ್ಯ ಸಾರ್ವತ್ರೀಕರಣಕ್ಕಾಗಿ ಮತ್ತು ವಿ.ಜಿ.ಕೆ.ಕೆ. ಹಾಗು ಕರುಣಾ ಟ್ರಸ್ಟ್. ಮತ್ತು ವಿಶ್ವಆರೋಗ್ಯ ಸಂಸ್ಥೆ ನೂತನವಾಗಿ ಹಮ್ಮಿಕೊಂಡಿರುವ ಪಿ. ಆರ್. ಎ. ಮತ್ತು ಸೂಕ್ಷ್ಮಯೋಜನೆ ಕಾರ್ಯಕ್ರಮದನ್ವಯ ಮುದುಕುತೊರೆ. ಹಾಗು ಹಳ್ಳಿ ತಿರುಕರಾಪುರದಲ್ಲಿ ತರಬೇತಿ ಪಡೆದು ಮೊದಲ ಬಾರಿಗೆ ಆಸಕ್ತಿ ಹೊಂದಿದವರಲ್ಲಿ ಪಿ. ಆರ್ ಎ. ಆರೋಗ್ಯ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

ಇದರ ಮೂಲ ಉದ್ದೇಶ ಹಳ್ಳಿಯಲ್ಲಿ ಜನರು ತಮ್ಮ ಆರೋಗ್ಯವನ್ನು ತಾವೆ ಕಾಪಾಡಿಕೊಳ್ಳುವುದು " ಗ್ರಾಮೀಣ ಜನತೆಯ ಉತ್ತಮ ಆರೋಗ್ಯಕ್ಕಾಗಿ ಸಶಕ್ತರನ್ನಾಗಿ ಮಾಡುವುದು.

ಈ ವಿಷಯದಲ್ಲಿ ದಿನಾಂಕ 16-12-99 ರಿಂದ 19-12-99 ರವರೆಗೆ ಗ್ರಾಮದ ಜನರೊಂದಿಗೆ ಬೆರೆತು ಅವರು ನೀಡಿದ ಸೂಕ್ತ ಮಾಹಿತಿಗಳನ್ನು ಪಡೆದು ಈ ಯೋಜನೆಯನ್ನು ಗ್ರಾಮದ ಜನರಿಗೆ ಸಾಕಷ್ಟು ಮಟ್ಟಿಗೆ ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸಿದ್ದೇವೆ.

ಈ ಕಾರ್ಯಕ್ರಮಕ್ಕೆ ಆಸಕ್ತಿ ಹೊಂದಿ ಗ್ರಾಮಸ್ಥರು ಸಹಕಾರ ನೀಡಿದರು. ಗ್ರಾಮಸ್ಥರಿಗೆ ಮುಖ್ಯವಾಗಿ. ನರಸೇಗೌಡರು. ಪುಟ್ಟಮಲ್ಲೇಗೌಡರು. ಕೆಂಚೇಗೌಡರು. ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇವೆ.


ವಂದನೆಗಳೊಂದಿಗೆ

<u>ತಂಡದವರು</u>.

P. ಮಹದೇವ - ಸ್ವಯಂ ಸೇವಕರು
N ಮಹದೇವಸ್ವಾಮಿ - ಸ್ವಯಂ ಸೇವಕರು
D. ಶೋಭಾ - ಕರುಣಾ ಟ್ರಸ್ಟ್

ತಮ್ಮ ವಿಶ್ವಾಸಿ.
P. ಮಹದೇವ
N. ಮಹದೇವಸ್ವಾಮಿ
D. ಶೋಭಾ

ಸಾಮಾಜಿಕ ಸಂಪನ್ಮೂಲ ನಕ್ಷೆ. ಆಲಕ್ರಿಕಟ್ಟೆಹುಂಡಿ. ದಿನಾಂಕ 16.12.99



ದಿನಾಂಕ: 16:12.99

Suggestions / Recommendations

Major Health Problem in the area.

nearest PHC :-

Serv avail in PHC :-

## ಸಾಮಾಜಿಕ ಸಂಪನ್ಮೂಲ ನಕ್ಷೆಯಿಂದ ಹೊರ ಬಂದ ಅಂಶಗಳು

೧ ಈ ಗ್ರಾಮದಲ್ಲಿರುವ ಜನರಿಗೆ ಮತ ಚಲಾವಣೆ ಮಾಡಲು ಅಥವಾ ಇತರೆ ಕೆಲಸಗಳಿಗೆ ತೊಂದರೆ ಇರುವುದರಿಂದ ಚಾಮರಾಜನಗರ ಅಥವಾ ಮೈಸೂರು ಜಿಲ್ಲೆಗಳಿವೆ ಆದರೆ ಇವೆರಡರಲ್ಲಿ ಯಾವುದಾದರೂ ಒಂದು ಜಿಲ್ಲೆಗೆ ಸೇರಿಸುವುದು ಸೂಕ್ತ.

೨ ಈ ಗ್ರಾಮದಲ್ಲಿ ಹೆಸರಿಗೆ ಮಾತ್ರ ನೀರಿನ ಟ್ಯಾಂಕುಗಳಿದ್ದು ಆದರೆ ಒಂದರಲ್ಲೂ ಸಮರ್ಪಕವಾದ ನೀರು ಬರುವುದಿಲ್ಲ


೩ ಇಲ್ಲಿ ಲೈಟ್ ಕಂಬಗಳು ಇದ್ದು ಆದರೆ ಒಂದು ಬೀದಿಗಳಲ್ಲೂ ಕೂಡ ದೀಪದ ವ್ಯವಸ್ಥೆ ಇರುವುದಿಲ್ಲ

೪ ಈ ಗ್ರಾಮದಲ್ಲಿ 83 ಮನೆಗಳಿದ್ದು ಆದರೆ ಒಂದು ಮನೆಯಲ್ಲಿ ಮಾತ್ರ ಶೌಚಾಲಯ ಇದೆ. ಆದುದರಿಂದ ಆರೋಗ್ಯದ ಶಿಕ್ಷಣ ಅಗತ್ಯ ಇರುತ್ತದೆ.

# ಸಂಪತ್ತಿನವಾರು ಶ್ರೇಣೀಕರಣ [WEALTH RANKING] ಅಲಸ್ತ್ರಿಕಟ್ಟೆಹುಂಡಿ

| | ಅತಿ ಬಡವರು | ಬಡವರು | ಮಧ್ಯಮ ವರ್ಗ | ಶ್ರೀಮಂತರು |
|---|---|---|---|---|
| ಲಕ್ಷಣಗಳು | ಜಮೀನು ಇಲ್ಲಾದಿರುವುದು. ದಿನ ಕೂಲಿ ಮಾಡಿ ಜೀವನ ಕಳೆಯುವವರು.<br>ಧನ ಕರು ಇಲ್ಲದಿರುವುದು ಸಾಲವೇ. ಜೀವನವಾಗಿರುತ್ತದೆ.<br>ದಿನದಲ್ಲಿ ಒಂದು ವೇಳೆ ಊಟ ಸಿಕ್ಕಿದ್ದರೆ ಮತ್ತೊಂದು ವೇಳೆ ಊಟಕ್ಕಿಲ್ಲದಿರುವುದು. | ೨೦ ಕುಂಟೆ ಮತ್ತು 30 ಕುಂಟೆ ಜಮೀನು ಇದ್ದರು ಸಹ ಕೂಲಿಯನ್ನು ಮಾಡುವರು.<br>ಜಾನುವಾರುಗಳು ಅಲ್ಪ ಮಟ್ಟದಲ್ಲಿ ಇರುವುದು.<br>ಸಾಲ ಸೋಲ ಮಾಡುತ್ತಾರೆ<br>ಇವರಿಗೆ ೨ ವೇಳೆ ಊಟ ಸಿಗುತ್ತದೆ. | [illegible]7 ಎಕರೆಗಿಂತ ಕಡಿಮೆ ಜಮೀನು ಉಳ್ಳವರು<br>೨ ಬೆಳೆ ತೆಗೆಯುವುದು ವರ್ಷಕ್ಕೆ.<br>ಕೆಲವು ದನ ಕರುಗಳು ಇರುವುದು<br>ದುಕಾನಿನಲ್ಲಿ ಸಾಲ ಕೇಳುವುದು ಇಲ್ಲಾ ಕೊಡುವುದು ಇಲ್ಲಾ<br>ಮೂರು ವೇಳೆ ಊಟ ಮಾಡುವರು | [illegible]ಎಕರೆಗಿಂತ ಹೆಚ್ಚು ಜಮೀನು ಹೊಂದಿರುವುದು ವರ್ಷದಲ್ಲಿ ೨ ಬೆಳೆ ತೆಗೆಯುವವರು<br>ದನಕರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವವರು<br>ಹಣದ ವ್ಯವಹಾರ ಮಾಡುವವರು<br>ಮೂರು ವೇಳೆ ಊಟ ಮಾಡುವವರು. |
| | 18 | 13 | 77 | 5 |

# ಋತುಮಾನ ನಕ್ಷೆ. ಆಲಸ್ಸಿಕಟ್ಟೆ ಹುಂಡಿ ದಿನಾಂಕ. 16.12.1999.




ಮಾಹಿತಿ ನೀಡಿದವರು

1) ನಂಜೇಗೌಡ
2) ಕೃಷ್ಣ ಮಲ್ಲೇಗೌಡ
3) ಕೃಷ್ಣ ಬಸಪ್ಪ
4) ಮಾದೇಗೌಡ
5) ಗೌರಮ್ಮ
6) ಮುದ್ದುಬಸವೇಗೌಡ
7) ತಿಂಗೆಗೌಡ

## ಋತುಮಾನ ನಕ್ಷೆಯಿಂದ ಕಂಡುಬಂದ ಅಂಶಗಳು 1

ದಿನಾಂಕ · 17 · 12 · 1999

೧ ಈ ಗ್ರಾಮದಲ್ಲಿ ಹೆಚ್ಚಾಗಿ ಕಡಲೆಕಾಯಿ ಹುರುಳಿ. ರೇಷ್ಮೆ ಬೆಳೆಗಳು ಮತ್ತು ರಾಗಿ ಬೆಳೆಗಳನ್ನು ಬೆಳೆಯು ವುದು ಕಂಡುಬರುತ್ತದೆ.

೨ ವರ್ಷದಲ್ಲಿ 3 ತಿಂಗಳು ಮಾತ್ರ ಜನರಿಗೆ ಕೆಲಸ ಇರುವುದು ಆದರೆ ಉಳಿದ ತಿಂಗಳು ಪಟ್ಟಣಗಳಿಗೆ ಹೋಗಿ ಕೆಲಸ ಮಾಡುವುದು ಕಂಡುಬರುತ್ತದೆ.

೩ ಈ ಗ್ರಾಮದಲ್ಲಿ ಸಾಮಾನ್ಯ ಖಾಯಿಲೆಗಳು ಮಳೆಗಾಲ ಹಾಗು ಬೇಸಿಗೆ ಕಾಲದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

# ಋತುಮಾನ ನಕ್ಷೆಯಿಂದ ಕಂಡು ಬಂದ ಅಂಶಗಳು


1) ಈ ಗ್ರಾಮದಲ್ಲಿ ಕೆಲಸವಿಲ್ಲದ ಸಮಯದಲ್ಲಿ ಉಪಕಸುಬುಗಳನ್ನು ಗಂಡಸರು ಹಾಗು ಹೆಂಗಸರು ಇಬ್ಬರು ಉಪಕಸುಬುಗಳನ್ನು ಮಾಡುವುದು ಸಾಕ್ತ.

2) ಈ ಗ್ರಾಮದಲ್ಲಿ ಸಾಮಾನ್ಯ ಕಾಯಿಲೆಗಳು ರೋಗಗಳು ಬಾರದಂತೆ ಮತ್ತು ಸ್ವಚ್ಛತೆಯನ್ನು ಕಾಪಾಡುವುದು ಮತ್ತು ಮುಂಜಾಗ್ರತೆ ಕ್ರಮ ವಹಿಸುವುದು ಸಾಕ್ತ.

# ಪೈ ನಕ್ಷೆ [PIE DIAGRAME] ಆಲತ್ರಿ ಕಟ್ಟೆಹುಂಡಿ

ದಿನಾಂಕ. 17.12.1999


## ಗ್ರಾಮದ ಜನರ ವೆಚ್ಚವಾದ ನಕ್ಷೆ







**ಸೂಚಕಗಳು**




**ಮಾಹಿತಿ ನೀಡಿರುವವರ ಹೆಸರು**

1. ಶಿವ ಬುದ್ಧಿ
2. ಮಾದೇಗೌಡ
3. ಸೋಮಣ್ಣ
4. ನಂಜೇಗೌಡ
5. ಶಿವೇಗೌಡ
6. ಬಸವೇಗೌಡ

**ಮಾಹಿತಿ ಪಡೆದವರ ಹೆಸರು**

ಬಿ. ಶೋಭಾ
ಪಿ. ಮಹದೇವ
ಎಂ. ಮಹದೇವಸ್ವಾಮಿ.

## ಪ್ರೈ. ನಕ್ಷೆಯಿಂದ ಕಂಡುಬಂದ ಅಂಶಗಳು.

1) ಈ ಗ್ರಾಮದಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಒತ್ತು ಕೊಡುವುದು ಕಂಡು ಬರುತ್ತಿದೆ.

2) ಈ ಗ್ರಾಮದಲ್ಲಿ ಖಾಯಿಲೆಗಳಿಗೆ ಹೆಚ್ಚು ಹಣ ವ್ಯಯ ಮಾಡುವುದು ಕಂಡುಬರುತ್ತದೆ.

3) ಸಾಲಕ್ಕಾಗಿ ಅಥವಾ ಬಡ್ಡಿಗಾಗಿ ಹಣ ವ್ಯಯ ಮಾಡುತ್ತಾರೆ.

## ಕುಟುಂಬದವರ ವೆಚ್ಚವಾರು ನಕ್ಷೆ

1) ಈ ಗ್ರಾಮದಲ್ಲಿ ಖಾಯಿಲೆಗಳಿಗೆ ಇವರು ಕೂಡ ಹೆಚ್ಚು ಖರ್ಚು ಮಾಡುತ್ತಾರೆ.

2) ಈ ಜನರು ದುಶ್ಚಟಗಳಿಗೆ ಹಣ ವ್ಯಯ ಮಾಡುತ್ತಾರೆ.

3) ಹಬ್ಬಗಳಿಗೆ ಹೆಚ್ಚು ಪ್ರಮಾಣದಲ್ಲಿ ಖರ್ಚು ಮಾಡುತ್ತಾರೆ.

# ಪೈ ನಕ್ಷೆಯಿಂದ ಹೊರಬಂದ ಅಂಶಗಳು. ದಿನಾಂಕ 17-12-99

1) ಈ ಗ್ರಾಮದಲ್ಲಿ ಕಾಯಿಲೆಗಳಿಗೆ ಹೆಚ್ಚು ಹಣ ವ್ಯಯ. ಮಾಡುವುದನ್ನು ಕಡಿಮೆ ಮಾಡಿ ಮುಂಜಾಗ್ರತಾ ಕ್ರಮ ವಹಿಸುವುದು ಸೂಕ್ತ.

2) ಸಾಲ ಮಾಡುವುದರ ಬದಲು ತಮ್ಮದೇ ಆದ ಉಪಕಸುಬು-ಗಳನ್ನುಮಾಡಿ ಸಾಲದ ಭಾರವನ್ನು ಕಡಿಮೆ ಮಾಡುವುದು ಸೂಕ್ತ.


## ಕಡುಬಡವರ. ವೆಚ್ಚಾವಾರು ನಕ್ಷೆ.

1) ಇಲ್ಲಿ ಜನರು ದುಶ್ಚಟಗಳಿಗೆ ಹಣ ವ್ಯಯ ಮಾಡುವುದರ ಬದಲು ಪೌಷ್ಟಿಕವಾದ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುವುದು ಸೂಕ್ತ.

# ಚಪಾತಿ ನಕ್ಷೆ

ಆಲತ್ತೂರ ಕಟ್ಟೆ ಹುಂಡಿ

ದಿನಾಂಕ. 17.12.99




**ಮಾಹಿತಿ ನೀಡಿದವರ ಹೆಸರು**

1. ನಂಜೇಗೌಡ
2. ಮಹದೇವಪ್ಪ
3. ಪುಟ್ಟಬುದ್ಧಿ
4. ಮಾದೇಗೌಡ
5. ಬಸವೇಗೌಡ

**ಮಾಹಿತಿ ಸಂಗ್ರಹಿಸಿದವರ ಹೆಸರು**


1. ಬಿ. ಶೋಭಾ
2. P. ಮಹದೇವ
3. ಗ. ಮಹದೇವಸ್ವಾಮಿ

# ಚಪಾತಿ ನಕ್ಷೆಯಿಂದ ಹೊರ ಬಂದ ಅಂಶಗಳು

1. ಈ ಗ್ರಾಮದ ಜನರು ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚು ದುಂದು ವೆಚ್ಚ ಮಾಡುವ ಬದಲು ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯ ಪಡೆಯುವುದು ಸೂಕ್ತ.

2) ಈ ಗ್ರಾಮದವರು ಮನೆ ಮದ್ದುಗಳನ್ನು ಮಾಡಿ ಆರೋಗ್ಯ ಕಾಪಾಡಿಕೊಳ್ಳುವುದು ಸೂಕ್ತ.

3) ಗ್ರಾಮದಲ್ಲಿ ಬೆಳೆಯುವ ತರಕಾರಿ ಸೊಪ್ಪು ಕಾಯಿ ಇವುಗಳು ಮತ್ತು ಪೌಷ್ಠಿಕವಾದ ಆಹಾರಗಳನ್ನು ಬಳಸುವುದು ಸೂಕ್ತ.



ಕಾಲ್ನಡಿಗೆ ನಕ್ಷೆ ಆಲನ್ನಿ ರಬ್ಬೆ ಹಾಡಿ 18.12.1999
= ತೆಂಗಿನಮರ
= ತೊಂಬೆ ನಲ್ಲಿ
= ಕೈಪಂಪು
= ಚರಂಡಿ
= ತಿಪ್ಪೆ
=
ಮಾಹಿತಿ ನೀಡಿದವರು
1. ಕೃಷ್ಣ ಬಾಬು
2. ಬಸವೇಗೌಡ
3. ಮಾದೇಗೌಡ
4. ನಂಜೇಗೌಡ
ಮಾಹಿತಿ ಪಡೆದವರು
1. ಡಿ. ಶೋಭಾ
2. ಪಿ. ಮಮತಾ
3. ಮಮತಾ ಜಸ್ಸಿಮ

# ಕಾಲ್ನಡಿಗೆ ನಕ್ಷೆಯಿಂದ ಹೊರ ಬಂದ ಅಂಶಗಳು

18. 12. 1999

1. ಈ ಗ್ರಾಮದಲ್ಲಿ ರಸ್ತೆಯ ಮಧ್ಯದಲ್ಲಿ ಚರಂಡಿ ಇರುವುದರಿಂದ ಅದನ್ನು ಒಳ ಚರಂಡಿ ವ್ಯವಸ್ಥೆ ಮಾಡುವುದು ಸೂಕ್ತ.

2. ರಸ್ತೆಯ ಪಕ್ಕದಲ್ಲಿ ಕಸಕಡ್ಡಿ ಸುರಿದು ತಿಪ್ಪೆ ಮಾಡುವುದರಿಂದ ಅದನ್ನು ಊರಿನ ಹೊರಗೆ ಹಾಕುವುದು ಸೂಕ್ತ.

3. ಊರಿನ ಮುಂಭಾಗ ಮಲ ವಿಸರ್ಜನೆ ಮಾಡುತ್ತಾರೆ, ಊರಿನ ಹೊರಗೆ ಅಥವಾ ಶೌಚಾಲಯ ಬಳಸುವುದು ಸೂಕ್ತ.

COM H 300


COMMUNITY HEALTH CELL
LIBRARY AND DOCUMENTATION UNIT

ದಿನಾಂಕ. ೧೮.೧೨.೯೯

# ಸುಲಲಿತವಾಗಿ ಬರುವ ನಕ್ಷೆ [FLOW CHART] [ಅಲಸ್ಯಾ ಕಟ್ಟ ಪ್ರಂಡಿ]

ಪ್ರಸ್ತುತಿ ಪಡಿಸುವವರು:

೧. ಶೋಭಾ
೨. ಮಹದೇವಸ್ವಾಮಿ
೩. ಮಹದೇವ.



## ಸುಲಲಿತವಾಗಿ ಬರುವ ನಕ್ಷೆ ಮಾದ ಹೀಗ ಬಂದ ರೋಗಗಳು

18.12.99

① ಅಶುದ್ಧವಾದ ನೀರಿನಿಂದ ಹಲವಾರು ಕಾಯಿಲೆಗಳು ಬರುವುದರಿಂದ ಇರುವ ನೀರನ್ನು ಸ್ವಚ್ಛತೆ ಮಾಡಿ ಕೊಂಡು ಬಳಸುವುದು ಸೂಕ್ತ.

② ಚರಂಡಿಗಳ ಸ್ವಚ್ಛತೆಯನ್ನು, ವೈಯಕ್ತಿಕ ಸ್ವಚ್ಛತೆ ಯನ್ನು ಕಾಪಾಡುವುದರಿಂದ ಕಾಯಿಲೆಗಳನ್ನು ಬರದಂತೆ ತಡೆಗಟ್ಟಬಹುದು.

# ಮ್ಯಾಟ್ರಿಕ್ಸ್ ಶ್ರೇಣೀಕರಣ [MATRIX RANKING]

## ಆರೋಗ್ಯ ಸೇವೆಗಳು. ತೆಗಲುವ ವೆಚ್ಚಗಳು.

| ಆರೋಗ್ಯ ಸೇವಾ ಸೌಲಭ್ಯಗಳು. | ಔಷಧಿ | ಸಾರಿಗೆ | ಆಹಾರ | ಶುಲ್ಕ | ಇತರೆ | ಒಟ್ಟು |
|---|---|---|---|---|---|---|
| ಅಂಗನವಾಡಿ ಕಾರ್ಯಕರ್ತೆ | 0 | 0 | 0 | 0 | 0 | – |
| ಕಿ. ಮ. ಆ. ಕಾರ್ಯಕರ್ತೆ | 0 | 0 | 0 | 0 | 0 | – |
| ಪ್ರಾಥಮಿಕ. ಆ. ಕೇಂದ್ರ | 0 | 0 | 0 | 0 | 0 | – |
| ತಾ|| ಸಾ. ಆಸ್ಪತ್ರೆ | 2 | 2 | 4 | 2 | 2 | 12 |
| ತಾ|| ಖಾ. ಆಸ್ಪತ್ರೆ | 4 | 2 | 6 | 5 | 4 | 21 |
| ಜಿಲ್ಲಾ. ಸಾ. ಆಸ್ಪತ್ರೆ | 5 | 6 | 7 | 6 | 5 | 29 |
| ಜಿಲ್ಲಾ. ಖಾ. ಆಸ್ಪತ್ರೆ | 8 | 6 | 8 | 8 | 6 | 36 |
| | 19 | 16 | 25 | 21 | 17 | 98 |

ಸೂಚನೆ: ಕನಿಷ್ಠ ವೆಚ್ಚಕ್ಕೆ 0 ರಿಂದ ಗರಿಷ್ಠ 10 ರವರೆಗೆ ಶ್ರೇಣೀಕರಣ ನೀಡಿದೆ.

## ಆರೋಗ್ಯ ಸೇವೆಗಳು ತೆಗಲುವ ವೆಚ್ಚಗಳು

| ಆರೋಗ್ಯ ಸೇವಾ ಸೌಲಭ್ಯಗಳು | ಲಭ್ಯತೆ | ನಂಬಿಕೆ | ನಷ್ಟ | ಒಟ್ಟು |
|---|---|---|---|---|
| ಅಂಗನವಾಡಿ ಕಾರ್ಯಕರ್ತೆ | 3 | 2 | 0 | 5 |
| ಕಿ. ಮ. ಆ. ಕಾರ್ಯಕರ್ತೆ | 4 | 6 | 0 | -10 |
| ಪ್ರಾಥಮಿಕ ಆರೋಗ್ಯ ಕೇಂದ್ರ | 0 | 0 | 0 | – |
| ತಾ|| ಸ. ಆಸ್ಪತ್ರೆ | 3 | 5 | 3 | 11 |
| ತಾ|| ಖಾ. ಆಸ್ಪತ್ರೆ | 6 | 6 | 7 | 19 |
| ಜಿಲ್ಲಾ. ಸ. ಆಸ್ಪತ್ರೆ | 3 | 4 | 7 | 14 |
| ಜಿಲ್ಲಾ. ಖಾ. ಆಸ್ಪತ್ರೆ | 4 | 4 | 8 | 16 |
| | 21 | 25 | 25 | 61 |

ಮಾಹಿತಿ ನೀಡಿದವರ ಹೆಸರು.

ಮಾಹಿತಿ ಪಡೆದವರ ಹೆಸರು.

B. ಶೋಭಾ

P. ಮಹದೇವಪ್ಪ

ಮಹದೇವಸ್ವಾಮಿ.

## ಮ್ಯಾಟ್ರಿಕ್ಸ್ ಶ್ರೇಣೀಕರಣದಿಂದ ಹೊರ ಬಂದ ಅಂಶಗಳು

1 ಖಾಸಗಿ ಆಸ್ಪತ್ರೆಗೆ ಹಣವನ್ನು ಖರ್ಚು ಮಾಡುವ ಬದಲು ಸರ್ಕಾರಿ ಆಸ್ಪತ್ರೆಯಲ್ಲಿ ಸಿಗುವ ಸವಲತ್ತುಗಳನ್ನು ಉಚಿತವಾಗಿ ಪಡೆದುಕೊಳ್ಳುವುದು ಸೂಕ್ತ.

2) ಸಣ್ಣ ಪುಟ್ಟ ಖಾಯಿಲೆಗಳಿಗೆ ಆಸ್ಪತ್ರೆಗೆ ಹೋಗುವ ಬದಲು ನಿಮ್ಮ ಮನೆಯಲ್ಲಿ ಸಿಗುವ ವಸ್ತುಗಳಿಂದ ಕಾಯಿಲೆ ಗುಣಪಡಿಸಿಕೊಳ್ಳುವುದು ಸೂಕ್ತ.

3) ಖಾಯಿಲೆ ಬಂದಾಗ ಪೂಜಾರಿಗೆ ಮತ್ತು ಡಾಕ್ಟರಿಗೆ ಹಣ ವೆಚ್ಚ ಮಾಡುವ ಬದಲು ಖಾಯಿಲೆ ಬಾರದಂತೆ ತಡೆಗಟ್ಟುವುದು ಸೂಕ್ತ.

ಉದಾ: ೧ ಮನೆಯ ಮುಂಭಾಗ ಸ್ವಚ್ಛತೆಯನ್ನು ಕಾಪಾಡುವುದು
೨ ವೈಯಕ್ತಿಕ ಸ್ವಚ್ಛತೆಯಾಗಿರುವುದು.

ದಿನಾಂಕ-18-12-99

# ಗ್ರಾಮದ ಇತಿಹಾಸ ಮತ್ತು ಸಮಯ ರೇಖೆ.

ಆಲಸ್ಸಿ ಕಟ್ಟೆಹುಂಡಿ

ಈ ಗ್ರಾಮದಲ್ಲಿ ಹಿಂದಿನ ಕಾಲದಿಂದಲೂ ಒಂದೇ ಮತದವರು ಇದ್ದರಂತೆ ಅಂದರೆ ಆಲಮುತಸ್ಸರ್ ಇದ್ದರಂತೆ ಮತ್ತು ಊರಿನ ಮುಂಭಾಗ ಒಂದು ಕಟ್ಟೆಯು ಇದೆ. ಆದುದರಿಂದ ಈ ಗ್ರಾಮಕ್ಕೆ ಆಲಸ್ಸಿ ಕಟ್ಟೆಹುಂಡಿ ಎಂದು ಹೆಸರು ಬಂತು.

| ಇಸವಿ | ವಿಷಯ |
|---|---|
| 1902 | - ರಲ್ಲಿ ಹಂಚಿನ ಮನೆಯನ್ನು ಕಟ್ಟಿದರಂತೆ. |
| 1925 | - ರಲ್ಲಿ ಈ ಗ್ರಾಮದಲ್ಲಿ ಸ್ಕೂಲ್ ಬಂದದ್ದು |
| 1947 | - ರಲ್ಲಿ ಕುಡಿಯುವ ನೀರಿಗಾಗಿ ನೆಲಬಾವಿಯನ್ನು ತೆಗೆದರಂತೆ |
| 1948 | - ರಲ್ಲಿ ಕಾಲರಾ ರೋಗವು ಕಂಡು ಬಂದಿತ್ತು. |
| 1950 | - ರಲ್ಲಿ ಸಿತಾಳ ಸಿಡುಬು ರೋಗ ಬಂದಿತು 4 ಜನರಿಗೆ. ಆದರೆ ಆ ರೋಗದಿಂದ ಬದುಕುಳಿದ್ದಾರೆ. |
| 1969 | - ರಲ್ಲಿ ಶಾಲಾ ಶಿಕ್ಷಣ ಪ್ರಾರಂಭವಾಯಿತು. |
| 1994 | - ರಲ್ಲಿ ದೂರದರ್ಶನ (T.V) ಅನ್ನು ಕಂಡಿತ್ತು |
| 1999 | - ರಲ್ಲಿ ಬಸ್ಸು ಸಾರಿಗೆ ವ್ಯವಸ್ಥೆಯನ್ನು ಕಂಡರಂತೆ. |

ಮಾಹಿತಿ ನೀಡಿದವರು
1) ಈರುಳ್ಳಿ ನಂಜೆಗೌಡರು [100 ವರ್ಷ]
2) ಕೆಂಚೇಗೌಡರು
3) ನಂಜೇಗೌಡ
4) ಪುಟ್ಟಮಲ್ಲೇಗೌಡ
5) ಪಟೇಲ್ ಬಸವೇಗೌಡ

ಮಾಹಿತಿ ಕ್ರೋಢೀಕರಿಸಿದವರು
P. ಮಹದೇವ
N. ಮಹದೇವಸ್ವಾಮಿ
D. ಶೋಭಾ

# ಗ್ರಾಮ ಸಮೀಕ್ಷೆಯಿಂದ ಕಂಡು ಬಂದ ಅಂಶ:

ಅಬ್ಬಿಕಟ್ಟೆಹಳ್ಳಿ — ದಿನಾಂಕ-19-12-99

| | |
|---|---|
| ಗ್ರಾಮದ ಒಟ್ಟು ಮನೆಗಳ ಸಂಖ್ಯೆ | 83 |
| ಗ್ರಾಮದ ಒಟ್ಟು ಕುಟುಂಬಗಳ ಸಂಖ್ಯೆ | 113 |
| ಗ್ರಾಮದಲ್ಲಿರು ಜಾತಿ ಕುರುಬರು | 111 |
| ಪಂಚಶಿಷ್ಟ ಜಂಗಮ | 2 |

ಗ್ರಾಮದ ಒಟ್ಟು ಜಮೀನು

| | |
|---|---|
| ತರಿ | 7.35 |
| ಖುಷ್ಕಿ | 172.25 |
| ಬಾಗಾಯ್ತು | 7.15 |
| ಒಟ್ಟು | 187.35 |

ಭೂ ಹಿಡುವಳಿ

| | |
|---|---|
| 10 ಎಕರೆಗಿಂತ ಹೆಚ್ಚು | — |
| 10 ಎಕರೆಗಿಂತ ಕಡಿಮೆ | 5. ~~[illegible]~~ |
| 5 ಎಕರೆಗಿಂತ ಕಡಿಮೆ | 87 |
| ಭೂ ರಹಿತರು | 21. ಇಲ್ಲದಿರುವವರು |

ಜನಸಂಖ್ಯೆ

| | | |
|---|---|---|
| 0 – 5 | =35 ಗ - | ಹೆ 32 ಒಟ್ಟು |
| 6 – 14 | =55 ಗ – | ಹೆ 53 ಒಟ್ಟು |
| 15 - | =209 ಗ - | ಹೆ 204 ಒಟ್ಟು |

ಕಾಯಿಲೆಗಳು

| ಫಿಟ್ಸ್. | ಅಂಗವಿಕಲತೆ. | ಬುದ್ಧಿಮಾಂದ್ಯ. | ಅಪೆಂಡಿಕ್ಸ್. | T.B. |
|---|---|---|---|---|
| 2 | 3 | 2 | 2 | 1 |

| ಚರ್ಮ ಕಾಯಿಲೆ | ~~ದಮ್ಮು~~ ಆಸ್ತಮ | ಪಿತ್ತ |
|---|---|---|
| 2 | 3 | 2 |

## ಮಾದರಿ ಕ್ರಿಯಾ ಯೋಜನೆ. [ಶ್ರೀ ಲಕ್ಷ್ಮಿ ಕಟ್ಟೆಹುಂಡಿ] ದಿನಾಂಕ 19. 12. 1999

| ಕ್ರಮ ಸಂಖ್ಯೆ | ಮಾಡಬೇಕಾದ ಕೆಲಸಗಳು | ವೈಯಕ್ತಿಕ ಜವಾಬ್ದಾರಿ. | ಸಮುದಾಯದ ಜವಾಬ್ದಾರಿ | ಸರ್ಕಾರದ ಜವಾಬ್ದಾರಿ | ಅವಧಿ | ಯಾರು ಜವಾಬ್ದಾರಿ ತೆಗೆದುಕೊಳ್ಳುವರು | ನಿರ್ವಹಣೆ ಯಾರು |
|---|---|---|---|---|---|---|---|
| 1 | ಕುಡಿಯುವ ನೀರಿನ ಸಮಸ್ಯೆ | | | ✓ | ಏಪ್ರಿಲ್ 2000. | ಮಹದೇವ | ಗುರುಮಲ್ಲಯ್ಯ |
| 2 | ಒಳ ಚರಂಡಿಯ ವ್ಯವಸ್ಥೆ | | | ✓ | ಜೂನ್ 2000. | ಕೆಂಪೇಗೌಡ | ಎ. ಮಲ್ಲೇಶ್ |
| 3 | ಬೀದಿ ದೀಪಗಳ ಸಮಸ್ಯೆ | | | ✓ | ಜನವರಿ 2000. | ರೇವಣ್ಣ | ಮಹೇಶ |
| 4) | 2 ಹಳ್ಳಿಗಳನ್ನು ಒಂದು ಹಳ್ಳಿ ಮಾಡುವುದು. | | | ✓ | – | ಮಹದೇವ<br>ಕೆಂಪೇಗೌಡರು | ಗುರುಮಲ್ಲೇಶ್ |
| 5) | ಶಾಲೆಗೆ ತಂತಿ ಬೇಲಿ | | ✓ | ✓ | ಮಾರ್ಚ್ 2000 | | |
| 6) | ಬೋರ್ ವೆಲ್ ದುರಸ್ತಿ | | ✓ | ✓ | 15 ದಿನ. | ಕೆಂಪೇಗೌಡರು | ಪಿ. ಪುಟ್ಟಸ್ವಾಮಿ |
| 7) | ಶೌಚಾಲಯ ಸಮಸ್ಯೆ | ✓ | ✓ | ✓ | ಜೂನ್ 2000. | | |
| 8) | ಹಾಲು ವಿತರಣಾ ಕೇಂದ್ರ | | | ✓ | – | ಮಲ್ಲೇಶ ಕುಮಾರ್ | ಶಿವಬಸವೇಗೌಡ |
| 9) | ಕೆರೆಗೆ ನೀರು ಸೇರುವ ದಾರಿ | | ✓ | ✓ | ಮಾರ್ಚ್ 2000 | ಸೋಮಣ್ಣ | ದೊರೆಸ್ವಾಮಿ |